ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**C.C. 13/2022**

ಸಿ.ಡಬ್ಲ್ಯೂ **-2,** ಪಿ.ಡಬ್ಲ್ಯೂ **-2**

ದಿಃ **21.05.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಮುಬಾರಕ್ ಖಾನ್ |
| ತಂದೆ/ಗಂಡನ ಹೆಸರು | ನಜರುಲ್ಲಾ ಖಾನ್ |
| ವಯಸ್ಸು | 23 ವರ್ಷ |
| ಕೆಲಸ | ಚಾಲಕ |
| ವಾಸಸ್ಥಳ | ಪಂಚವಳ್ಳಿ |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ಪ್ರಸಾ**-1** ಗೊತ್ತು. ನಾನು ಅವರೊಂದಿಗೆ ಮೊಟ್ಟೆ ಸಾಗಾಣಿಕೆಯ ಕೆಲಸ ಮಾಡುತ್ತೇನೆ. ಸುಮಾರು **4** ವರ್ಷದ ಹಿಂದೆ ಸುಮಾರು ರಾತ್ರಿ **8.00** ಗಂಟೆ ಸಮಯದಲ್ಲಿ ನಾವು ಮೈಸೂರು ಕಡೆಯಿಂದ ಕುಶಾಲನಗರದ ಕಡೆಗೆ ಮಹಿಂದ್ರಾ ಪಿಕ್ ಅಪ್ ವಾಹನದಲ್ಲಿ ಹೋಗುತ್ತಿದ್ದಾಗ, ಬಿಳಿಕೆರೆಯ ಕೊಪ್ಪ ಗ್ರಾಮದ ಬಳಿ ಕೆ.ಎಸ್.ಆರ್.ಟಿ.ಸಿ ಬಸ್ ನಮ್ಮ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಹೊಡೆಯಿತು. ಅಪಘಾತದಿಂದ ನಮಗೆ ಮೊಟ್ಟೆ ಒಡೆದುಹೋಗಿ ಮತ್ತು ವಾಹನ ಜಖಂಗೊಂಡು ಸುಮಾರು **11** ಲಕ್ಷ ನಷ್ಟವಾಗಿರುತ್ತದೆ. ಅಪಘಾತವು ಬಸ್ ಚಾಲಕನ ತಪ್ಪಿನಿಂದ ನಡೆದಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿಯೇ ಅಪಘಾತಪಡಿಸಿದ ವ್ಯಕ್ತಿಯಾಗಿರುತ್ತಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನಾವು ಹೋಗುತ್ತಿರುವ ಹಾಗೂ ಅಪಘಾತಪಡಿಸಿದ ಬಸ್ಸನ್ನು ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ ವಕೀಲರಿಂದಃ**

ದಿಃ **05.12.2021** ರಂದು ಸಂಜೆ **6.40** ಗಂಟೆ ಸಮಯದಲ್ಲಿ ಕೆಎ**-09-**ಸಿ**-4620**

ನಂಬರಿನ ಬುಲೆರೋ ಪಿಕ್ ಅಪ್ ವಾಹನದಲ್ಲಿ ಡೆಕನ್ ಕೋಳಿ ಫಾರಂನಿಂದ ಮೊಟ್ಟೆಯನ್ನು ತುಂಬಿಕೊಂಡು ಮೈಸೂರಿನಿಂದ ಬೈಲಕುಪ್ಪೆಗೆ ಹೋಗುತ್ತಿದ್ದೇವು ಎಂದರೆ ಸರಿ. ಕುಪ್ಪೆ ಕೊಳಗಟ್ಟದ ಬಳಿ ನಮ್ಮ ವಾಹನವನ್ನು ನಿಧಾನವಾಗಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ, ಹಿಂಭಾಗದಿಂದ ಕೆ.ಎಸ್.ಆರ್,ಟಿ.ಸಿ ಬಸ್ಸಿನ ಚಾಲಕ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ನಮ್ಮ ವಾಹನಕ್ಕೆ ಡಿಕ್ಕಿ ಪಡಿಸಿರುತ್ತಾನೆಂದರೆ ಸರಿ. ವಾಹನದ ಹಿಂಭಾಗ ಪೂರ್ಣವಾಗಿ ಜಖಂಗೊಂಡಿತ್ತು ಎಂದರೆ ಸರಿ. ಅಪಘಾತದಿಂದ ನಮ್ಮ ವಾಹನದಲ್ಲಿದ್ದ ಮೊಟ್ಟೆ ಒಡೆದುಹೋಗಿ, ಸುಮಾರು ರೂ.**1,72,956/-** ಗಳಷ್ಟು ನಷ್ಟವಾಗಿರುತ್ತದೆಂದರೆ ಸರಿ. ಅಪಘಾತಪಡಿಸಿದ ಬಸ್ ಸಂ.ಕೆಎ-**07**-ಎಫ್-**1836** ಆಗಿರುತ್ತದೆಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ Y.G ವಕೀಲರಿಂದಃ</u>**

ಅಪಘಾತ ನಡೆದ ಸ್ಥಳದ ಬಿಳಿಕೆರೆ ಕೊಪ್ಪ. ಅಪಘಾತ ನಡೆದ ಸಮಯ ರಾತ್ರಿ **8.00** ಗಂಟೆ ಆಗಿತ್ತು. ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ **6.40** ಎಂದು ನೀವು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ಅಪಘಾತವಾಯಿತು ಎಂದು ಹೇಳುವ ಜಾಗ ಅಪ್ ಇದೆ ಎಂದರೆ ಸರಿಯಲ್ಲ. ಮುಂದುವರೆದು ಸಂಪೂರ್ಣವಾಗಿ ಡೌನಿನಲ್ಲಿ ಇದೆ ಎಂದು ನುಡಿಯುತ್ತಾರೆ. ಅಪಘಾತವಾಯಿತು ಎಂದು ಹೇಳುವ **100** ಮೀ ಜಾಗದಲ್ಲಿ ಸರ್ಕಾರಿ ಶಾಲೆ ಇದೆ ಎಂದರೆ ಸರಿ. ಸರ್ಕಾರಿ ಶಾಲೆ ಇದ್ದುದ್ದರಿಂದ, ಮಕ್ಕಳು ಓಡಾಡುತ್ತಾರೆಂದು ಬ್ಯಾರಿಕೆಟ್ ಹಾಕಿದ್ದರು ಎಂದರೆ ಸರಿ. ಅಪಘಾತವಾಯಿತು ಎಂದು ಹೇಳುವ ಜಾಗದಲ್ಲಿ ಒಂದು ರಸ್ತೆಯ ದುಬ್ಬ ಇದೆ ಎಂದರೆ ಸರಿಯಲ್ಲ. ರಸ್ತೆಯ ದುಬ್ಬ ಇದ್ದು, ರಾತ್ರಿ **8.00-8.30** ಆಗಿದ್ದ ಕಾರಣ ನಿಮಗೆ ಕಾಣದ ಕಾರಣ ಅಪಘಾತ ನಡೆದಿದೆ ಎಂದರೆ ಸರಿಯಲ್ಲ. ರಸ್ತೆಯ ದುಬ್ಬ ಇದ್ದ ಕಾರಣ ಪ್ರಾಸಾ-**1** ರವರು ತಕ್ಷಣ ಬ್ರೆಕ್ ಹಾಕಿದ್ದರು ಎಂದರೆ ಸರಿಯಲ್ಲ. ಅಪಘಾತಪಡಿಸಿದ ಬಸ್ಸು ಜನರಿಂದ ತುಂಬಿತ್ತು ಎಂದರೆ ಸರಿ. ಜನ ತುಂಬಿದ್ದರಿಂದ ಬಸ್ ನಿಧಾನವಾಗಿ ಚಲಿಸುತ್ತಿದ್ದು, ಪ್ರಾಸಾ-**1** ರವರ ಸಡನ್ ಬ್ರೆಕ್ ಹಾಕಿದ್ದ ಕಾರಣ ಅವರದೇ ತಪ್ಪಿನಿಂದ ಅಪಘಾತ ನಡೆದಿರುತ್ತದೆ ಎಂದರೆ ಸರಿಯಲ್ಲ.

ನಾನು ಪ್ರಾಸಾ-**1** ರವರೊಂದಿಗೆ **5-6** ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ನಾನು ಹಾಗೂ ಪ್ರಾಸಾ-**1** ರವರು ತುಂಬಾ ಚೆನ್ನಾಗಿದ್ದೇವೆ. ಪ್ರಾಸಾ-**1** ರವರ ತಪ್ಪಿನಿಂದ ಅಪಘಾತವಾಗಿದ್ದರೂ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. **11** ಲಕ್ಷ ನಷ್ಟವಾಗಿದೆ ಎಂದು ಹೇಳಿದ್ದು, ಸದರಿ ನಷ್ಟವೂ ಪ್ರಾಸಾ-**1** ರವರ ತಪ್ಪಿನಿಂದ ಆಗಿದ್ದು, ವಾಹನದ ಮಾಲೀಕರು ಬೈಯುತ್ತಾರೆಂದು ಕೆ.ಎಸ್.ಆರ್.ಟಿ.ಸಿ ಬಸ್ ಚಾಲಕನ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.